<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಗಳು ಇವರ</u>

<u>**ನ್ಯಾಯಾಲಯ, ಮೂಡಿಗೆರೆ.**</u>

<u>**ಸಿ.ಸಿ. ಸಂಖ್ಯೆ.523/2021**</u>

| | | |
|---|---|---|
| ಸಾಕ್ಷಿದಾರರ ಹೆಸರು | ಸತೀಶ್ | ಸಿ.ಡಬ್ಲ್ಯೂ: 4 ಪಿ.ಡಬ್ಲ್ಯೂ: 3 |
| ತಂದೆಯ ಹೆಸರು | ಶೇಶಪ್ಪಗೌಡ | |
| ವಯಸ್ಸು | 48 ವರ್ಷ | |
| ಉದ್ಯೋಗ | ಕೂಲಿ ಕೆಲಸ | |
| ವಾಸ ಸ್ಥಳ | ದುರ್ಗದಹಳ್ಳಿ, ಮೂಡಿಗೆರೆ ತಾ: | |

ದಿನಾಂಕ: 11.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>**ಮುಖ್ಯ ವಿಚಾರಣೆ** ವಿಶೇಷ **ಸ.ಸ.ಅ.ರವರಿಂದ:**</u>

1. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. ಚಾಸಾ.1 ಮತ್ತು 3 ನನಗೆ ಗೊತ್ತು. ಈಗ ನಾನು ನೋಡುತ್ತಿರುವ ನೋಟೀಸಿನಲ್ಲಿ ನನ್ನ ಸಹಿ ಇರುತ್ತದೆ ಎಂದು ಸಾಕ್ಷಿ ಗುರುತಿಸಿದ್ದರಿಂದ ನೋಟೀಸನ್ನು ನಿ.ಪಿ.5 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ನಿ.ಪಿ.2 ಮಹಜರ್ ನಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ನಿ.ಪಿ.3 ಮತ್ತು 4 ಛಾಯಚಿತ್ರಗಳಲ್ಲಿ ನಾನು ಹಾಜರಿರುತ್ತೇನೆ.

2. ದಿ: 03.07.2019 ರಂದು ಚಾಸಾ.1 ರವರ ಮನೆಯ ಬಳಿ ಬಾಳೂರು ಪೊಲೀಸರು ಮಹಜರ್ ಗೆ ಎಂದು ಬಂದಾಗ ಆ ಸಹಿಯನ್ನು ನಾನು ಮತ್ತು ಚಾಸಾ.3 ರವರು ಮಾಡಿದ್ದೆವು. ಪೊಲೀಸರ ಕೋರಿಕೆಯ ಮೇರೆಗೆ ಮಹಜರ್ ಗೆ ಎಂದು ಹೇಳಿದ್ದರಿಂದ ಆ ಸಹಿಯನ್ನು ಮಾಡಿದ್ದೇನೆ. ಛಾಯಚಿತ್ರಗಳನ್ನು ಯಾವ ವಿಚಾರಕ್ಕೆ ತೆಗೆಯುತ್ತಿದ್ದೇವೆ ಎಂದು ತಿಳಿಸಲಿಲ್ಲ. ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಸ್ಥಳವನ್ನು ಚಾಸಾ.1 ರವರು ತೋರಿಸಿದ್ದರು. ಮಹಜರ್ ಅನ್ನು 1 ರಿಂದ 2 ಗಂಟೆ ವರೆಗೆ ಜರುಗಿಸಿದ್ದರು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು ಸ.ಸ.ಅ. ರವರಿಂದ</u>**

3. ದಿಃ 03.07.2019 ರಂದು ಪೊಲೀಸರು ನಿ.ಪಿ.5 ರಂತೆ ನೋಟೀಸು ನೀಡುವ ಸಮಯದಲ್ಲಿ ಈ ಕೇಸಿನ ಎಲ್ಲಾ ವಿಚಾರವನ್ನು ನನಗೆ ತಿಳಿಸಿದ್ದರು ಎಂದರೆ ಸರಿ. ಈ ಕೇಸಿನ ವಿಚಾರವನ್ನು ತಿಳಿಸಿ ಮಹಜರ್ ಜರುಗಿಸಿ ಛಾಯಚಿತ್ರಗಳನ್ನು ತೆಗೆದಿದ್ದರು ಎಂದರೆ ಸರಿ. ಮಹಜರ್ ನಲ್ಲಿ ಇರುವ ವಿಚಾರಗಳನ್ನು ಸಹ ಓದಿ ತಿಳಿಸಿದ್ದರು ಎಂದರೆ ಸರಿ.

<u>ಪಾಟೀ ಸವಾಲು ಶ್ರೀ ಡಿ.ಎಸ್. ವಕೀಲರಿಂದ – ಆರೋಪಿತಳ ಪರವಾಗಿ</u>

4. ದಿಃ 03.07.2019 ರಂದು ನಾನು ಸ್ಥಳಕ್ಕೆ ಮಹಜರ್ ಗೆ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಸ್ಥಳಕ್ಕೆ ಬರುವಂತೆ ನನಗೆ ನೋಟೀಸು ನೀಡಿಲ್ಲ ಎಂದರೆ ಸರಿಯಲ್ಲ. ಮಹಜರ್ ಅನ್ನು 1 ರಿಂದ 2 ರ ಸಮಯಕ್ಕೆ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ಸರ್ವೆ ನಂಬರ್ ನಲ್ಲಿ ಮಹಜರ್ ಜರುಗಿಸಿದ್ದರು ಎಂದು ನನಗೆ ಗೊತ್ತಿಲ್ಲ. ಮಹಜರ್ ನಲ್ಲಿ ಬರೆದಿರುವ ಚಕ್ಕುಬಂದಿ ಮತ್ತು ಸ್ಥಳದ ಬಗ್ಗೆ ನನಗೆ ಗೊತ್ತಿಲ್ಲ. ಪೊಲೀಸರು ಬರೆದು ಸಹಿ ಮಾಡು ಎಂದು ಹೇಳಿದ ಕಾರಣ ನಾನು ಸಹಿ ಮಾಡಿದ್ದೆ ಎಂದರೆ ಸರಿ. ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿಲ್ಲ ಮತ್ತು ಪೊಲೀಸರು ಓದಿ ಹೇಳಲಿಲ್ಲ. ಚಾಸಾ.1 ರವರು ನನ್ನನ್ನು ಈ ದಿನ ಸಾಕ್ಷಿ ಹೇಳುವಂತೆ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ಚಾಸಾ.1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಗೂ, ಛಾಯಚಿತ್ರಗಳಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಧಾನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ